# <u>ಮುಖ್ಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಯಾದಗಿರಿ</u>

## <u>ಸಿ.ಸಿ. ನಂ. 57 / 2019</u>

ಸಿಡಬ್ಲ್ಯೂ- **24**
ಪಿಡಬ್ಲ್ಯೂ-**09**

<u>ದಿನಾಂಕಃ **16.01.2025.**</u>

<u>ಸಾಕ್ಷಿಗೆ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು</u>

| | | |
|---|---|---|
| ಸಾಕ್ಷಿಯ ಹೆಸರುಃ | - | ಭೀಮರಾಯ |
| ತಂದೆಯ/ಗಂಡನ ಹೆಸರುಃ | - | ಬಸವರಾಜ |
| ವಯಸ್ಸುಃ | -? | **21** ವರ್ಷ |
| ಉದ್ಯೋಗಃ | - | ಕ್ಷೌರಿಕ. |
| ವಾಸಸ್ಥಳಃ | - | ಮುಂಡರಗಿ. |

<u>ಮುಖ್ಯ ವಿಚಾರಣೆಃ ಸ.ಸ.ಅ. ರವರಿಂದಃ</u>

ದಿನಾಂಕಃ 31.05.2018 ರಂದು ರಾತ್ರಿ 10 ಗಂಟೆಗೆ ನನ್ನ ಅಂಗಡಿಯನ್ನು ಮುಚ್ಚಿ, ಚಾಸಾ-25 ರವರ ಹೊಟೇಲ್ ನಲ್ಲಿ ನಿಂತಿದ್ದಾಗ. ಒಂದು ಬೂದಿ ಟ್ಯಾಂಕರ್ ಯಾದಗಿರಿ ಕಡೆಯಿಂದ ಬಂದು ಜೀಪಿಗೆ ಡಿಕ್ಕಿಪಡಿಸಿ, ನಂತರ ಅದು ಹೊಟೇಲ್ ಗುದ್ದಿ ನನ್ನ ಅಂಗಡಿಯ ಮೇಲೆ ಹಾಯ್ದು ಮುಂದೆ ಹೋಗಿರುತ್ತದೆ. ಸದರಿ ಅಪಘಾತದಿಂದ ಜೀಪಿನಲ್ಲಿ ಇದ್ದ ಮೂರು ಜನರು ಸ್ಥಳದಲ್ಲಿ ಮೃತಪಟ್ಟಿದ್ದರು. ಉಳಿದವರಿಗೆ ಪೆಟ್ಟುಗಳು ಆಗಿದ್ದರು. ಸದರಿ ಅಪಘಾತದಿಂದ ನನ್ನ ಅಂಗಡಿಗೆ 1 ಲಕ್ಷ ನಷ್ಟ ಆಗಿರುತ್ತದೆ. ಅಪಘಾತ ಪಡಿಸಿದ ಚಾಲಕನನ್ನು ನಾನು ನೋಡಿದರೆ ಗುರುತಿಸುತ್ತೇನೆ. ಗಾಯಗೊಂಡವರನ್ನು ತುರ್ತು ಚಿಕಿತ್ಸಾ ವಾಹನದಲ್ಲಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದರು. ಬೂದಿ ಟ್ಯಾಂಕರ ಚಾಲಕನ ಹೆಸರು ನನಗೆ ಗೊತ್ತಿರುವುದಿಲ್ಲ. ಬೂದಿ ಟ್ಯಾಂಕರ ಚಾಲಕನ ತಪ್ಪಿ ನಿಂದ ಅಪಘಾತ ಆಗಿರುತ್ತದೆ. ಬೂದಿ ಟ್ಯಾಂಕರನ್ನು ಪೋಟೋದಲ್ಲಿ ತೋರಿಸಿದ್ದಾರೆ ಅದನ್ನು ನಾನು ಗುರುತಿಸುತ್ತೇನೆ ಸದರಿ ಪೋಟೋಗಳನ್ನು ಈಗಾಗಲೇ ನಿಪಿ 2 ರಿಂದ 5 ಎಂದು ಗುರುತಿಸಲಾಗಿರುತ್ತದೆ. ಈ ಬಗ್ಗೆ ನಾನು ಪೊಲೀಸರ ಮುಂದೆ ಹೇಳಿಕೆಯನ್ನು ಕೊಟ್ಟಿರುತ್ತೇನೆ.

(ಈ ಹಂತದಲ್ಲಿ ಸಾಕ್ಷಿಯು ಭಾಗಶಃ ಪ್ರತಿಕೂಲಕರ ಸಾಕ್ಷ್ಯವನ್ನು ನುಡಿದ ಕಾರಣ ಸ.ಸ.ಅಭಿಯೋಜಕರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. )

පාಟೀ ಸವಾಲುಃ ಸ.ಸ.ಅ ರವರಿಂದಃ

ಆ ದಿನ ಟ್ಯಾಂಕರ ಚಾಲಕನು ಅಪಘಾತ ಪಡಿಸಿ ಸ್ಥಳದಿಂದ ಓಡಿ ಹೋದನ್ನು ಎಂದರೆ ಸರಿ. ಓಡಿ ಹೋದ ವ್ಯಕ್ತಿಯ ಈಗ ನ್ಯಾಯಾಲಯದ ಮುಂದೆ ಇರುತ್ತಾನೆ. ದಿನಾಂಕಃ 19.09.2018 ರಂದು ನನ್ನನ್ನು ಪೊಲೀಸರು ಕರೆದು, ಒಬ್ಬ ವ್ಯಕ್ತಿಯನ್ನು ತೋರಿಸಿದ್ದು. ಆತನೇ ಬೂದಿ ಟ್ಯಾಂಕರ ಚಾಲಕನ್ನಾಗಿರುತ್ತಾನೆ ಎಂದು ನಾನು ಗುರುತಿಸಿದ್ದೆ ಎಂದರೆ ಸರಿ. ಆತನ ಹೆಸರನ್ನುವಿಚಾರಿಸಿದ್ದಾಗ ಆನಂದಪ್ಪ ತಂದೆ ಮಹಾದೇವಪ್ಪ ಜಾಮದಾರ್ ಸಾಃ ಕಲಬುರಗಿ ಎಂದು ತಿಳಿಸಿದ್ದನ್ನು ಎಂದರೆ ಸರಿ. ಆರೋಪಿತನು ಸದರಿ ಬೂದಿ ಟ್ಯಾಂಕರನ್ನು ಅತೀ ವೇಗ ಮತ್ತು ಅಲಕ್ಷ್ಯತನದಿಂದ ಚಲಾಯಿಸಿದ್ದರಿಂದ ಅಪಘಾತ ಆಗಿರುತ್ತದೆ ಎಂದರೆ ಸರಿ.

ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ.ಜಿ.ಬಿ.ಆರ್. ರವರಿಂದಃ

ನಾನು ಕ್ಷೌರಿಕನ್ನಾಗಿರುತ್ತೇನೆ. ನನ್ನ ಅಂಗಡಿಯನ್ನು ಬೆಳಗ್ಗೆ 7 ಗಂಟೆಗೆ ತೆರೆದು ರಾತ್ರಿ 9 ಗಂಟೆಗೆ ಮುಚ್ಚುತ್ತೇನೆ. ಆ ದಿನ ರಾತ್ರಿ 9 ಗಂಟೆಗೆ ನಾನು ನನ್ನ ಅಂಗಡಿಯನ್ನು ಮುಚ್ಚಿ ದ್ದೆ. ನನ್ನ ಅಂಗಡಿಯಿಂದ ನನ್ನ ಮನೆಯು 1 ಕಿ.ಮೀ ಅಂತರದಲ್ಲಿ ಇರುತ್ತದೆ. ಆ ದಿನ ನಾನು ನನ್ನ ಅಂಗಡಿಯ ಪಕ್ಕದಲ್ಲಿ ಇರುವ ಹೋಟಲ್ ನಲ್ಲಿ ಇದ್ದೆ. ಆ ದಿನ ನಾನು ಒಬ್ಬನೇ ಹೊಟೇಲ್ ನಲ್ಲಿ ನಿಂತಿದ್ದೆ. ನಾನು ಹೊಟೇಲ್ ನಲ್ಲಿ ನಿಂತಿದ್ದ ಕಾರಣ ಮುಖ್ಯ ರಸ್ತೆಯ ಮೇಲೆ ನನಗೆ ಏನು ಆಕಾಣುವುದಿಲ್ಲ ಎಂದರೆ ಸರಿಯಲ್ಲ. ಹೊಟೇಲ್ ದಿಂದ 20 ಮೀಟರ ಅಂತರದಲ್ಲಿ ಮುಖ್ಯ ರಸ್ತೆ ಇರುತ್ತದೆ. ಸದರಿ ಯಾದಗಿರಿ - ಹೈದ್ರಬಾದ್ ಮುಖ್ಯ ರಸ್ತೆಯ ಮೇಲೆ ವಾಹನಗಳು ಸಂಚಾರಿಸುತ್ತವೆ ಎಂದರೆ ಸರಿ. ಸದರಿ ರಸ್ತೆಯು ಅಗಲುವಾದ ರಸ್ತೆಯು ಇರುತ್ತದೆ ಎಂದರೆ ಸರಿ. ಸದರಿ ರಸ್ತೆಯ ಮೇಲೆ ವಿಭಾಜನೆ ಇರುತ್ತದೆ ಎಂದರೆ ಸರಿ. ಆ ಸಮಯದಲ್ಲಿ ಲಾರಿಯು ಎಷ್ಟು ವೇಗದಲ್ಲಿ ಇತ್ತು ಎಂದು ನನಗೆ ಹೇಳಲು ಬರುವುದಿಲ್ಲ ಎಂದರೆ ಸರಿಯಲ್ಲ. ಆ ಸಮಯದಲ್ಲಿ ಜೀಪು ರಾಮಸಮುದ್ರ ಕಡೆಯಿಂದ ಬಂದಿತ್ತು. ಲಾರಿ ಯಾರು ನಡೆಸುತ್ತಿದ್ದರು ಎಂದು ನಿಮ್ಮಗೆ ಹೇಳಲು ಆಗುತ್ತದೇಯೇ ಎಂದರೆ ಸಾಕ್ಷಿಯು ಪೋಟೋ ನೋಡಿ ಹೇಳುತ್ತೇನೆ ಎಂದು ಹೇಳುತ್ತಾರೆ. ಜೀಪು ಯಾರು ನಡೆಸುತ್ತಿದ್ದರು ಎಂದು ನಿಮ್ಮಗೆ ಹೇಳಲು ಆಗುತ್ತದೇಯೇ ಎಂದರೆ ಸಾಕ್ಷಿಯು ನನಗೆ ಹೇಳಲು ಆಗುವುದಿಲ್ಲ ಅವರು ಜಾಗದ ಮೇಲೆ ಔಟು ಆಗಿದ್ದರು ಎಂದು ಹೇಳುತ್ತಾರೆ. ಪೋಟೋವನ್ನು ಯಾರು ತೋರಿಸಿದ್ದರು ಎಂದರೆ ಸಾಕ್ಷಿಯು ಪೊಲೀಸರು ತೋರಿಸಿರುತ್ತಾರೆ ಎಂದು ಹೇಳುತ್ತಾರೆ. ಸದರಿ ಪೋಟೋಗಳನ್ನು ಪೊಲೀಸ್ ಠಾಣೆಯಲ್ಲಿ ನನಗೆ ತೋರಿಸಿದ್ದರು. ಸುಮಾರು 3 ತಿಂಗಳ ನಂತರ ಸದರಿ ಪೋಟೋಗಳನ್ನು ಪೊಲೀಸರು ನನಗೆ ತೋರಿಸಿದ್ದರು ಎಂದರೆ ಸರಿ. ಲಾರಿಯ ಚಾಲಕನು ಚಾಲನಾ ಪರವಾನಿಗೆ ಪತ್ರ

ಹೊಂದಿದ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಬೂದಿ ಟ್ಯಾಂಕರನ ಚಾಲಕನ ತಪ್ಪಿ ನಿಂದ ಅಪಘಾತ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿತನೇ ಅಪಘಾತ ಪಡಿಸಿರುತ್ತಾನೆ ಎಂದು ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಆರೋಪಿತನು ಬೂದಿ ಟ್ಯಾಂಕರನ್ನು ನಡೆಸುತ್ತಿರಲಿಲ್ಲ ಎಂದರೆ ಸರಿಯಲ್ಲ. ಜೀಪು ಚಾಲಕನ ತಪ್ಪಿ ನಿಂದ ಅಪಘಾತ ಆಗಿರುತ್ತದೆ ಎಂದರೆ ಸರಿಯಲ್ಲ. ಆರೋಪಿತನೇ ಬೂದಿ ಟ್ಯಾಂಕರನ್ನು ಚಲಾಯಿಸುತ್ತಿದ್ದನ್ನು ಎಂದು ಹೇಳಿ ಪೊಲೀಸರು ಸುಳ್ಳು ಅಂತಿಮ ವರದಿಯನ್ನು ಸಲ್ಲಿಸಿದ ಮೇರೆಗೆ ನಾನು ಆತನೇ ಟ್ಯಾಂಕರನ್ನು ಚಲಾಯಿಸುತ್ತಿದ್ದನ್ನು ಎಂದು ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ. ದಿನಾಂಕಃ 19.09.2018 ರಂದು ಪೊಲೀಸರು ಇತನೇ ಆರೋಪಿ ಇರುತ್ತಾನೆ ಎಂದು ತೋರಿಸಿದರ ಮೇರೆಗೆ ನಾನು ಆರೋಪಿತನೇ ಅಪಘಾತ ಪಡಿಸಿರುತ್ತೇನೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಜೀಪು ವಿಮೆಗೆ ಒಳಪಡದೇ ಇರುವ ಕಾರಣ ಹಾಗೂ ಅದರ ಚಾಲಕನು ಚಾಲನಾ ಪರವಾನಿಗೆ ಪತ್ರ ಹೊಂದದೇ ಇರುವ ಕಾರಣ ಈ ಸುಳ್ಳು ಪ್ರಕರಣವನ್ನು ಆರೋಪಿತನ ಬೂದಿ ಟ್ಯಾಂಕರ ಮೇಲೆ ಅಪಘಾತ ಪರಿಹಾರವನ್ನು ಪಡೆಯುವ ಸಲುವಾಗಿ ಸಲ್ಲಿಸಿರುತ್ತಾರೆ ಎಂದರೆ ಸಾಕ್ಷಿಯು ಸದರಿ ವಾಹನ ವಿಮೆ ಒಳಪಟ್ಟಿದರ ಬಗ್ಗೆ ನನಗೆ ಗೊತ್ತಿರುವುದಿಲ್ಲ ಎಂದು ಹೇಳುತ್ತಾರೆ. ನನಗೆ ಪೊಲೀಸರು ಈ ರೀತಿಯಾಗಿ ಹೇಳು ಎಂದು ಹೇಳಿದ ಕಾರಣ ನಾನು ಸುಳ್ಳು ಸಾಕ್ಷ್ಯಹೇಳುತ್ತಿದ್ದೇನೆಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲಃ</u>

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚುಗಾರನಿಂದ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಅದೆ.

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು,
ಯಾದಗಿರಿ.